ಮೈಸೂರ ಗೆಜೆಟ್ಟ

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಏಪ್ರಿಲ್ ತಾ॥ 4, ಸನ್ 1885.

"ಸಪ್ಲಿ" ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಬೆಂಗಳೂರು ಷಹರ್ ಮ್ಯುನಿಸಿಪ್ಯಾಲಿಟಿ.

ಸರಟಿಫಿಕೇಟ್.

ನಂ. 608. ತಾರೀಖು 10ನೇ ಮಾರ್ಚ್ 1885.

ಇದರಿಂದ ಸರಟಿಫೈ ಮಾಡುವದೇನಂದರೆ, ವೀತಾರಾಮಯ್ಯನ ಕೊಳದ ಸಮೀಪದಲ್ಲಿಯೂ ಮೈಸೂರು ಸ್ಟೇಟ್ ರೈಲ್ವೆ ಇಲಾಖಾ ಸ್ಟಾಫ್‌ಕ್ವಾರಟರಿನ ಬಾಜೂದಲ್ಲಿಯೂ ಇರುವ ಹಾಲಿ ಸ್ಮಶಾನಘಟ್ಟವು ಈಗಿನಂತೆಯೆ ಉಳಿಸಲ್ಪಟ್ಟರೆ ಅದರ ಆಜೂಬಾಜೂದಲ್ಲಿನ ನಿವಾಸ ಸ್ಥರ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡತಕ್ಕಂಥಾ ಸ್ಥಿತಿಯಲ್ಲಿರುವದರಿಂದ ಹಾಲಿ ಇರತಕ್ಕ ಸ್ಮಶಾನಘಟ್ಟದಿಂದ ಆಚೆಗೆ ಸ್ವಲ್ಪದೂರ ದಲ್ಲಿಯೇ ಮುರದೆಗಳ ದರ್ಖ ಮತ್ತು ಸುಡುವ ಬಗ್ಗೆ ಈಗಿರುವದಕ್ಕೆ ಬದಲಾಗಿ ಬೇರೆ ಸ್ಮಶಾನಘಟ್ಟವು ನಿಯಮಿಸಲ್ಪಟ್ಟಿರುತ್ತೆ. ಇದರಿಂದ ಯಚ್ಚರಿಸುವದೇನಂದರೆ, ಈ ಸರ್ಟಿಫಿಕೇಟ್ ತಾರೀಖು ಮೊದಲು ಯಾರಾದರೂ ತಿಂಗಳು ಕಳೆದ ತರುವಾಯ ಯಾವ ಮನುಷ್ಯನಾಗಲೀ ಸದರೀ ವೀತಾರಾಮಯ್ಯನ ಕೊಳದ ಸಮೀಪದಲ್ಲಿಯೂ ರೈಲ್ವೇ ಸ್ಟಾಫ್‌ಕ್ವಾರಟರಿನ ಬಾಜೂದಲ್ಲಿಯೂ ಯಿರತಕ್ಕ ಮೇಲೆ ಸ್ಮಶಾನಘಟ್ಟದಲ್ಲಿ ಯಾವ ಹೆಣವನ್ನಾದರು ಸುಟ್ಟ್ಯಾಗ್ಯೂ ಹೂಳಿದಾಗ್ಯೂ ಅಂಥಾ ಪ್ರತೀ ಮನುಷ್ಯನೂ [illegible] ಮ್ಯುನಿಸಿಪಲ ರೆಗ್ಯುಲೇಷನಿನ 190ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ದಂಡಗಳಿಗೆ ಗುರಿಯಾಗತಕ್ಕದ್ದು.

ವೈಸ್ ಪ್ರೆ

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿ॥ ಸಬ್‌ಜಡ್ಜ್‌ರೀಯವರ ಕೋರ್ಟ್.

1885ನೇ ಇಸವಿ ಆರ್ಜೀ ನಂಬರ 124.

ಮೃತಪಟ್ಟ ನಾರಣಪ್ಪನವರ ಆಸ್ತಿ ವಿಷಯದಲ್ಲಿ—

ಆರ್ಜೀದಾರರು ತುಮಕೂರು ಈಸಬಾ ರಾಘುವೇಂದ್ರಪ್ಪನವರು, ಮೃತಪಟ್ಟ ಸದರೀ ನಾರಣಪ್ಪನವರ ಮೇಲೆ ತುಮಕೂರು ಸ್ಥಳದ ರಾಘವೇಂದ್ರಪ್ಪನವರು, ತುಮಕೂರು ವಾಸಸ್ಥರಾಗಿ ಮೃತಪಟ್ಟ ನಾರಣ[illegible]

ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಘವೇಂದ್ರಪ್ಪನವರ ಅರ್ಜೀಯನ್ನು 1885ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 125.

ಮೃತಪಟ್ಟ ನಂಜಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಚಿತ್ರದುರ್ಗ ಕಾಡಪ್ಪನು, ಮೃತಪಟ್ಟ ಸದರೀ ನಂಜಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿತ್ರದುರ್ಗದ ಸ್ಥಳದ ಕಾಡಪ್ಪನವರು ಚಿತ್ರದುರ್ಗದ ವಾಸಸ್ಥರಾಗಿ ಮೃತಪಟ್ಟ ನಂಜಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾಡಪ್ಪನವರ ಅರ್ಜೀಯನ್ನು 1885ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಮೊರ್ಚೀ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್‌ಜಡ್ಜ್.

ಪ್ರಸಿದ್ಧ ಪತ್ರಿಕೆ.

ಮೈಸೂರು ಷಹರಿಗೆ ಕೇರಿದ ಕುಕ್ಕರಹಳ್ಳಿ ತಲಾವಿಗೆ ನೀರು ಬರತಕ್ಕ ಕಾಲ್ವೆಯನ್ನು ಬಡಾಯಿನತಕ್ಕ ಕೆಲಸಕ್ಕಾಗಿ ಯಿಷ್ಟವುಳ್ಳವರು ದರಖಾಸ್ತುಗಳನ್ನು ಕೊಡಬಹುದು.

2. ಇದಕ್ಕೆ ಸಂಬಂಧಪಟ್ಟ ಅಂದಾಜು ನಕ್ಷೆ, ದರಗಳ ತಪಸೀಲು ಮತ್ತು ಷರತ್ತುಗಳು ಇವುಗಳನ್ನು ತಿಳಿದುಕೊಳ್ಳತಕ್ಕವರ್ಯ ಪ್ರತಿನಿತ್ಯವೂ ಹಗಲು 11 ಗಂಟೆವಳಗಾಗಿ ಮೈಸೂರು ಡಿವಿಜ್ ಯಗ್ಜಿಕ್ಯೂಟಿವ್ ಇಂಜನೀರು ಆಫೀಸಿಗೆ ಹಾಜರಾಗಿ ತಿಳಿದುಕ್ಕೆ ಕ್ಕುಹುದು.

ಇದರ ಕೆಳಗೆ ತೋರಿಸಿ ಇರುವ ನಮೂನೆ ಅನುಸರಿಸಿ ಕಳುಹಿಸಬೇಕಾದ ಟೆಂಡರ್‌ಗಳನ್ನು ಮೊಹರ್ ಮಾಡಿ ಕಳುಹಿಸತಕ್ಕದ್ದು. ಹೀಗೆ ಕಳುಹಿಸಬೇಕಾದ ಟೆಂಡರ್‌ಗಳಿಗೆ ಸ್ಯ 1885ನೇ ಇಸವಿ ಏಪ್ರಿಲ್ ತಾರೀಖು 25ರವರಿಗೆ ಅವಧಿ ಇರುತ್ತೆ.

ಟೆಂಡರ್‌ಗಳ ನಮೂನೆ.

ದರಗಳ ತಪಸೀಲ್ ಪಟ್ಟಿಯಲ್ಲಿ ನಮೂದಿಸಿ ಯಿರುವ ಸರ್ಕಾರ್ ದರಗಳಿಗಿಂತಲೂ ಕೀಕಡಾ ನುಸರಿಸಿ ನ್ನು ನಡಿಸಲು ಯಿಷ್ಟವುಳ್ಳವನಾಗಿದ್ದೇನೆ.

ಕೆಂಟ್ರಾಕ್ಟುದಾರನ ಸೈ.

ಮುಂಜೂರ್ ಮಾಡತಕ್ಕದ್ದು ಸೂಪರ್‌ಟೆಂಡಿಂಗ್ ಯಿಂಜಿನೀರು ಸಾಹೆಬರವರನ್ನು ಇತ್ಯಾದಿ ಟೆಂಡರನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ಅವುಗಳನ್ನು ತಿರಸ್ಕರಿಸುವದಕ್ಕೂ ಸೂಪರ್‌ಟೆಂಡಿಂಗ್ ಯಿಂಜನೀರು ಸಾಹೆಬರು ಬದ್ಧರಾಗುವದಿಲ್ಲಾ.

ವಿ. ಹೆಚ್. ಕರ್ವಿ,
ಎಗ್ಜಿಕ್ಯೂಟಿವ್ ಇಂಜನೀರ್, ಮೈಸೂರು ಡಿವೀಜ್.